# ವಿಶ್ವನಂದಿನಿ ಲೇಖನಮಾಲೆ — 82

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ನಲವತ್ತನೆಯ ಪದ್ಯ

ಹೀಗೆ ಪರಮಾತ್ಮ ಕೇವಲ ಕರ್ಮಗಳ ಲೇಪವಿರದವನಷ್ಟೇ ಅಲ್ಲ, ಅವನ ಅನುಗ್ರಹವಿದ್ದಾಗ ಮಾತ್ರ ನಾವು ಮಾಡುವ ಕರ್ಮಗಳು ಫಲಪ್ರದವಾಗುವತ್ತವೆ ಎನ್ನುವ ಮಾತನ್ನು ದಾಸರು ಪ್ರತಿಪಾದಿಸುತ್ತಾರೆ —

**ಏನು ಮಾಡಿದರೇನು ಕರ್ಮವ**
**ನೀನೊಲಿಯದಿನ್ನಿಲ್ಲವಿದಕನು-**
**ಮಾನವುಂಟೇ ಭ್ರಮರಕೀಟನ್ಯಾಯದಂದದಲಿ ।**
**ನೀನೊಲಿಯೆ ತೃಣ ಪರ್ವತವು ಪುಸಿ-**
**ಯೇನು ನೀ ಪತಿಕರಿಸೆ ಬಳಿಕಿ-**
**ನ್ನೇನು ಚಿಂತಿಸಲೇಕೆ ರಕ್ಷಿಸು ನಮ್ಮನನವರತ ॥ ೪೦ ॥**

ಏನು ಕರ್ಮವ ಮಾಡಿದರೇನು, ನೀನೊಲಿಯದೆ ಇನ್ನಿಲ್ಲ. ಇದಕೆ ಅನುಮಾನವುಂಟೇ?

‘ಏನು ಕರ್ಮವ ಮಾಡಿದರೇನು?’ ಯಾವ ಅಶ್ವಮೇಧಯಜ್ಞ, ಗೋದಾನ, ಭೂದಾನ, ಉಪವಾಸ ವ್ರತ ಮುಂತಾದ ಸತ್ಕರ್ಮಗಳನ್ನು ಮಾಡಿದರೇನು ? ಯಾವ ಫಲವೂ ಅದರಿಂದ ಉಂಟಾಗುವದಿಲ್ಲ, ಕಾರಣ, ‘ನೀನೊಲಿಯದಿನ್ನಿಲ್ಲ’ ಸಕಲಕರ್ಮಗಳಿಗೆ ಫಲಪ್ರದನಾದ ನಿನ್ನ ಅನುಗ್ರಹವಿಲ್ಲದೇ ಫಲ ದೊರೆಯಲು ಸಾಧ್ಯವಿಲ್ಲ.

ಕರ್ಮ ಇದು ಜಡವಾದದ್ದು. ಅದೇ ಸಾಕ್ಷಾತ್ತಾಗಿ ನಮಗೆ ಫಲವನ್ನು ನೀಡುವದಿಲ್ಲ. ಪರಮಾತ್ಮನೇ ಆಯಾಯ ಕರ್ಮಗಳಿಗೆ ಫಲವನ್ನು ನೀಡಬೇಕು. ಸತ್ಕರ್ಮಗಳ ಫಲವಾಗಿ ನಾವು ಜ್ಞಾನಾದಿಗಳನ್ನು ಪಡೆಯಬೇಕೆಂದರೆ ಪರಮಾತ್ಮ ಅನುಗ್ರಹ ಮಾಡಿ ನೀಡಬೇಕು. ಪರಮಾತ್ಮ ಅನುಗ್ರಹ ಮಾಡಬೇಕು ಎಂದರೆ ಪರಮಾತ್ಮನಲ್ಲಿ ನಾವು ಭಕ್ತಿಯನ್ನು ಮಾಡಬೇಕು. ಆ ಭಕ್ತಿಯನ್ನೂ ನಾವು ಸ್ವತಂತ್ರವಾಗಿ ಮಾಡಲು ಸಾಧ್ಯವಿಲ್ಲ. ಪರಮಾತ್ಮನೇ ಅನುಗ್ರಹಿಸಿ ಭಕ್ತಿಯನ್ನು ನೀಡಿ, ಪರಮಾತ್ಮನೇ ಅನುಗ್ರಹಿಸಿ ನಮ್ಮಿಂದ ಕರ್ಮಗಳನ್ನು ಸರಿಯಾಗಿ ಮಾಡಿಸಿ, ಪರಮಾತ್ಮನೇ ಅನುಗ್ರಹಿಸಿ ನಮ್ಮ ಕರ್ಮಗಳಿಗೆ ಫಲವನ್ನು ನೀಡಬೇಕು. ಸರ್ವಾತ್ಮನಾ

ಅಧೀನರಾದವರು ನಾವು. ಹೀಗಾಗಿ ಎಲ್ಲದಕ್ಕೂ ಮೂಲಭೂತವಾದ ಪರಮಾತ್ಮ ದಯೆ ನಮ್ಮಲ್ಲಿರದಿದ್ದರೆ ಏನು ಮಾಡಿದರೇನು ? ಯಾವುದೂ ಉಪಯೋಗವಿಲ್ಲದ್ದು.

‘ಇದಕೆ’ ಈ ತತ್ವದ ವಿಷಯದಲ್ಲಿ ‘ಅನುಮಾನವುಂಟೇ’ ಸಂಶಯವಿರಲು ಸಾಧ್ಯವೇ ? ನಿಶ್ಚಿತವಾಗಿ ಇಲ್ಲ. ಕಾರಣ, ನಮ್ಮ ಅಸ್ವಾತಂತ್ರ್ಯ ನಮಗೇ ಗೋಚರವಾಗುತ್ತಿದೆ. ಫಲವನ್ನು ನಾವು ಸ್ವಾತಂತ್ರ್ಯದಿಂದ ಪಡೆಯಲು ಸಾಧ್ಯವಿಲ್ಲ ಎನ್ನುವದು ನಮಗೇ ಗೊತ್ತಿದೆ.

ಇನ್ನು ಕುಡಿದ ತಕ್ಷಣ ತೃಪ್ತಿಯನ್ನು ನೀಡುವ ಶಕ್ತಿ ನೀರಿಗಿದ್ದ ಹಾಗೆ, ಅನುಷ್ಠಾನ ಮಾಡಿದ ತಕ್ಷಣ ಜ್ಞಾನ, ಸುಖ, ಮೋಕ್ಷಗಳನ್ನು ನೀಡುವ ಸಾಮರ್ಥ್ಯ ಕರ್ಮಗಳಿಗಿದ್ದರೆ ನಾವೇಕೆ ಸಂಸಾರದಲ್ಲಿ ದುಃಖಿಗಳಾಗಿ ಬದುಕುತ್ತಿದ್ದೆವು. ಬಾಯಾರಿದ ಒಡನೆಯೇ ನೀರು ಕುಡಿದು ದೇಹವನ್ನು ತಣಿಸುವ ಹಾಗೆ ದುಃಖ ಬಂದೊಡನೆಯೇ ಕರ್ಮಗಳನ್ನು ಮಾಡಿ ಮೋಕ್ಷವನ್ನು ಪಡೆದು ಬಿಡುತ್ತಿದ್ದೆವು.

ಹಾಗಾಗಿಲ್ಲ. ಅಂದಮೇಲೆ, ಕರ್ಮಗಳಿಗೆ ಫಲ ನೀಡುವ ಸಾಮರ್ಥ್ಯವಿಲ್ಲ ಎಂದಾಯಿತು.

ಇನ್ನು ಬ್ರಹ್ಮ ರುದ್ರ ಇಂದ್ರ ಮುಂತಾದ ದೇವತೆಗಳು ಕರ್ಮಗಳಿಗೆ ಫಲವನ್ನು ನೀಡುತ್ತಾರೆ, ಆದ್ದರಿಂದ ಅವರನ್ನು ಮೊರೆ ಹೋಗೋಣ ಎಂದರೆ ಅವರೇ ಸೃಷ್ಟಿ ಸಂಹಾರ ಪಾಲನೆಗಳ ಕರ್ತವ್ಯದಲ್ಲಿ ನಿರತರಾಗಿದ್ದಾರೆ. ಸ್ವಯಂ ಕರ್ಮಾಚರಣೆ ಮಾಡುತ್ತಾ ಆ ಕರ್ಮಗಳಿಗೆ ಫಲವನ್ನು ನೀಡು ಎಂದು ಭಗವಂತನನ್ನು ಬೇಡುವ ಆ ಜನ ನಮ್ಮ ಕರ್ಮಗಳಿಗೆ ಫಲಪ್ರದರಾಗಲು ಸಾಧ್ಯವಿಲ್ಲ. ನಿನ್ನ ಭೂರಿ ಅನುಗ್ರಹವನ್ನು ಪಡೆದ ಕಾರಣ ಸ್ವರ್ಗಾದಿಗಳನ್ನು ನೀಡಬಲ್ಲರೇ ಹೊರತು ಜ್ಞಾನ ಮೋಕ್ಷಗಳನ್ನು ನೀಡಲು ಸಾಧ್ಯವಿಲ್ಲ. ಸರ್ವನಿಯಾಮಕ, ಕರ್ಮಫಲಪ್ರದ, ಸ್ವತಂತ್ರ ಎಂದು ವೇದಗಳಿಂದ ಪ್ರತಿಪಾದ್ಯನಾದವನು ನೀನೊಬ್ಬನೇ. ಹೀಗಾಗಿ ನಿನ್ನನ್ನೇ ನಾವು ಮೊರೆ ಹೊಕ್ಕ ಬೇಕು. ನಿನ್ನಿಂದಲೇ ಅನುಗ್ರಹವನ್ನು ಪಡೆಯಬೇಕು. ಬೇರೆ ದಾರಿಯಲ್ಲ ಎನ್ನುವ ಈ ತತ್ವದಲ್ಲಿ ಸಂಶಯವೇ ಇಲ್ಲ.

‘ಭ್ರಮರಕೀಟನ್ಯಾಯದಂದದಲಿ’
ಭ್ರಮರಕೀಟನ್ಯಾಯದಂತೆ ನೀನು ಒಲಿಯೆ ನೀನು ಅನುಗ್ರಹ ಮಾಡಿದಾಗ
‘ಪರ್ವತವು’ ವಿಘ್ನ, ರೋಗ, ದುಃಖ, ಅವಮಾನ, ಅಜ್ಞಾನ ಮುಂತಾದ ಯಾವುದೇ ಬೆಟ್ಟದಂತಹ ಸಮಸ್ಯೆಯೂ,
‘ತೃಣ’ ಒಂದು ಹುಲ್ಲುಕಡ್ಡಿಗೆ ಸಮಾನವಾಗಿ ಬಿಡುತ್ತದೆ. ಪುಸಿಯೇನು ? ಈ ಮಾತು ಸುಳ್ಳೇನು ಸರ್ವಥಾ ಸುಳ್ಳಲ್ಲ ಎಂದು ಅಭಿಪ್ರಾಯ.

ನಾವು ನಡೆದು ಹೋಗುವಾಗ ದಾರಿಯಲ್ಲಿ ಬೆಟ್ಟವೊಂದು ಅಡ್ಡವಾದರೆ ಅದನ್ನು ಬಳಸಿ ಹೋಗುತ್ತೇವೆ. ಕಾರಣ, ಅದನ್ನೆತ್ತಿ ಪಕ್ಕಕ್ಕಿರಿಸುವ, ಅಥವಾ ಅದನ್ನು ಪುಡಿ ಪುಡಿ ಮಾಡುವ ಸಾಮರ್ಥ್ಯ ನಮಗಿಲ್ಲ. ಅದೇ, ನಡೆಯುವಾಗ ಒಂದು ಮುಳ್ಳಿನ ಗಿಡ ಕಾಲಿಗೆ ತೊಡರಿದರೆ ಅದನ್ನು ಕಿತ್ತು ದೂರಕ್ಕೆ ಬಿಸಾಡಿ ಮುಂದೆ ಹೋಗುತ್ತೇವೆ.

ಸಾಧನ ಮಾರ್ಗದಲ್ಲಿ ನಡೆಯುವಾಗ ಸಮಸ್ಯೆ ಇನ್ನೂ ಜಟಿಲ. ಈ ಮಾರ್ಗದಲ್ಲಿ ಕಾಮಗಳು, ವಿಘ್ನಗಳು, ಅನಾರೋಗ್ಯ, ಅಜ್ಞಾನಗಳೇ

ಪರ್ವತಾಕಾರದ ಸಮಸ್ಯೆಗಳು. ನಡೆಯುವಾಗ ಬೆಟ್ಟ ಅಡ್ಡವಾದರೆ ಅದನ್ನು ಬಳಸಿ ಮತ್ತೊಂದು ಮಾರ್ಗದಲ್ಲಿ ಹೋಗಬಹುದು. ಅಲ್ಲಿ ಅನೇಕ ದಾರಿಗಳಿವೆ. ಆದರೆ, ಸಾಧನ ಮಾರ್ಗ ಒಂದೇ. ಈ ಮಾರ್ಗದಲ್ಲಿ ಅಡ್ಡದಾರಿ, ಬಳಸುದಾರಿ, ಕಿರುದಾರಿ ಎಂದೆಲ್ಲ ಇಲ್ಲ. ಸಾಧನ ಮಾಡುವಾಗ ಕಾಮ ಆವರಿಸಿದರೆ ಸಾಧನೆಯ ನಡೆ ನಿಲ್ಲಬೇಕೇ ಹೊರತು ಮತ್ತೊಂದು ಉಪಾಯವಿಲ್ಲ. ಆದರೆ, ಭಗವಂತ ಅನುಗ್ರಹ ಮಾಡಿದಲ್ಲಿ, ದಾಟಲು ಅಸಾಧ್ಯವಾದ ಕಾಮಪರ್ವತವನ್ನೂ, ವಿಘ್ನಪರ್ವತವನ್ನೂ, ಒಂದು ಹುಲ್ಲನ್ನು ಕಿತ್ತು ಪಕ್ಕಕ್ಕೆಸೆಯುವಂತೆ, ಪುಡಿ ಪುಡಿ ಮಾಡಿ ಮುಂದಕ್ಕೆ ಸಾಗಬಹುದು. ಶ್ರೀಮದಾಚಾರ್ಯರು ಗೀತಾಭಾಷ್ಯದಲ್ಲಿ ತಿಳಿಸುತ್ತಾರೆ -- “ದೇವಸ್ತು ತಾನಿ ಸಾಧನಾನಿ ಭಕ್ತಿಮತಃ ಸ್ವಯಮೇವ ಅಪ್ರಯತ್ನೇನ ದದಾತೀತಿ ಚ ಅತಿಸೌಕರ್ಯಮಿತಿ ಭಕ್ತಾನಾಂ ಭಗವದುಪಾಸನೇ” ಭಗವಂತನ ಜ್ಞಾನವನ್ನು ಪಡೆಯಲು ಅತ್ಯವಶ್ಯವಾಗಿ ಬೇಕಾಗಿರುವ ಇಂದ್ರಿಯನಿಗ್ರಹ ಮುಂತಾದ ಸಾಧನಗಳನ್ನು, ಅದಕ್ಕೆ ತೊಡಕಾಗಿರುವ ಕಾಮ ಮುಂತಾದ

ವಿಘ್ನಗಳನ್ನು ಸ್ವಯಂ ಭಗವಂತನೇ ತನ್ನ ಭಕ್ತರಿಗೆ ಅತೀಸುಲಭವಾಗಿ ಪರಿಹರಿಸಿ ಅವರನ್ನು ಸಾಧನಮಾರ್ಗದಲ್ಲಿ ಮುನ್ನಡೆಸುತ್ತಾನೆ. ಹೀಗಾಗಿ ಪರಮಾತ್ಮ ಒಲಿದು ಬಿಟ್ಟರೆ ಎಂಥ ಸಮಸ್ಯೆಯೂ ಪರಿಹೃತವಾಗಿಬಿಡುತ್ತದೆ.

ಚಿಟ್ಟೆ ತಾನು ಮೊಟ್ಟೆಯನ್ನಿಟ್ಟ ಬಳಿಕ ಆ ಮೊಟ್ಟೆಯಿಂದ ಕೀಟದ ಆಕಾರದ ಹುಳು ಹೊರಬರುತ್ತದೆ. ಸೃಷ್ಟಿಯಲ್ಲಿನ ಒಂದು ಅತ್ಯಂತ ವಿಚಿತ್ರವಾದ ಘಟನೆ. ಜಗತ್ತಿನಲ್ಲಿ ಕಪಿಯಿಂದ ಕಪಿ ಹುಟ್ಟಿ ಬರುತ್ತದೆ, ಗುಬ್ಬಿಯಿಂದ ಗುಬ್ಬಿಯೇ ಹುಟ್ಟಿ ಬರುತ್ತದೆ, ಮನುಷ್ಯರಿಂದ ಮನುಷ್ಯರೇ ಹುಟ್ಟಬರುತ್ತಾರೆ. ಆದರೆ ಹಾರಾಡುವ ಚಿಟ್ಟೆಯಿಂದ ಸರಿದಾಡುವ ಹುಳು ಹುಟ್ಟಿ ಬರುತ್ತದೆ. ಆದರೆ, ಇನ್ನೂ ವಿಚಿತ್ರವೆಂದರೆ, ಹುಟ್ಟಿದ ಕೀಟಕ್ಕೆ ತಾನು ಚಿಟ್ಟೆಯಿಂದ ಹುಟ್ಟಿದ್ದು ನಾನೂ ಹಾರಾಡುತ್ತ ಬದುಕಬೇಕು, ಸರಿದಾಡುತ್ತಾ ಬದುಕಬಾರದು ಎಂಬ ಜ್ಞಾನವಿರುತ್ತದೆ. ಅದಕ್ಕಾಗಿಯೇ ಅದು ತನ್ನ ಸುತ್ತಲೂ, ತನ್ನ ಎಂಜಲಿನಿಂದಲೇ ಒಂದು ಗೂಡನ್ನು ಕಟ್ಟಿಕೊಂಡು ತಾನು ಸದಾ ಚಿಟ್ಟೆಯಾಗುವದನ್ನೇ ಯೋಚಿಸುತ್ತಾ ಒಂದು ಪಕ್ವಾವಸ್ಥೆಯ ಕಾಲ

ಬಂದಾಗ ತಾನೇ ತನ್ನ ಸುತ್ತಲೂ ಕಟ್ಟಿಕೊಂಡ ಗೂಡನ್ನು ಸೀಳಿ ಹೊರಬಂದು ಚಿಟ್ಟೆಯಾಗಿ ಹಾರತೊಡಗುತ್ತದೆ. ಇದನ್ನೇ ಭ್ರಮರಕೀಟನ್ಯಾಯ ಎನ್ನುತ್ತಾರೆ. ಭ್ರಮರ ಎಂದರೆ ಚಿಟ್ಟೆ. ಕೀಟ ಎಂದರೆ ಹುಳು. ರೇಷ್ಮೆಯ ಹುಳುವಿನ ಪ್ರಸಂಗದಲ್ಲಿ ತುಂಬ ಸ್ಪಷ್ಟವಾಗಿ ಈ ಪ್ರಕ್ರಿಯೆಯನ್ನು ನಾವು ಕಾಣುತ್ತೇವೆ.

ಜೀವ ಪರಮಾತ್ಮರ ಸಂಬಂಧವೂ ಇದಕ್ಕೆ ಹೊರತಾಗಿಲ್ಲ. ಹಾರಾಡುವ ಚಿಟ್ಟೆಯಿಂದ ಸರಿದಾಡುವ ಹುಳು ಹುಟ್ಟಿ ಬಂದ ಹಾಗೆ, ಸ್ವತಂತ್ರನಾದ, ಸರ್ವಶಕ್ತನಾದ, ಜನನ ಮರಣಗಳಿಲ್ಲದ ಭಗವಂತನಿಂದ ಅವನ ಪ್ರತಿಬಿಂಬರಾಗಿ, ಅಸ್ವತಂತ್ರರಾಗಿ, ಅನುದ್ಬಲರಾಗಿ ನಾವು ಹುಟ್ಟಿಬರುತ್ತೇವೆ. ನಮ್ಮ ಬಿಂಬನಾದ ಭಗವಂತ ನಿತ್ಯಮುಕ್ತನಾಗಿರುವಂತೆ, ಸದಾ ಆನಂದವನ್ನು ಅನುಭವಿಸುತ್ತಿರುವಂತೆ ನಾವೂ ಮುಕ್ತರಾಗಿ ನಮ್ಮ ಯೋಗ್ಯತೆಯಂತೆ ಆನಂದವನ್ನು ಅನುಭವಿಸಬೇಕು.

ಆದರೆ, ಮನುಷ್ಯ ಹುಳುವಿಗಿಂತಲೂ ಕಡೆ ಎನ್ನುವದಕ್ಕೆ ಮತ್ತೂ ಒಂದು ಪುರಾವೆ ಇಲ್ಲಿದೆ. ಆ

ಚಿಟ್ಟೆಯಿಂದ ಹುಟ್ಟಿದ ಕೀಟಕ್ಕೆ ತಾನು ಚಿಟ್ಟೆಯ ಮಗು, ನಾನು ಕೀಟವಾಗಿರಬಾರದು, ತಾನೂ ಚಿಟ್ಟೆಯಾಗಬೇಕು ಎಂಬ ಹಂಬಲ ಮತ್ತು ತಿಳುವಳಿಕೆ ಹುಟ್ಟಿನ ಜತೆಯಲ್ಲಿಯೇ ಬಂದುಬಿಡುತ್ತದೆ. ಆದರೆ, ಮನುಷ್ಯನಿಗೆ ತಾನು ಪರಮಾತ್ಮನ ಪ್ರತಿಬಿಂಬ ಎನ್ನುವದೇ ತಿಳಿದಿಲ್ಲ. ತಾನು ಜ್ಞಾನ ಆನಂದಗಳಿಂದ ತುಂಬಿದ ಅಪ್ರಾಕೃತ ಶರೀರದ ದುಃಖದ ಸಂಪರ್ಕವೇ ಇಲ್ಲದ ಉತ್ತಮ ಚೇತನ ಎನ್ನುವದೂ ತಿಳಿದಿಲ್ಲ. ಹೀಗಾಗಿ ಅದಕ್ಕಾಗಿ ಪ್ರಯತ್ನವನ್ನೇ ಮಾಡುವದಿಲ್ಲ.

ಆದ್ದರಿಂದ ಪರಮಾತ್ಮನೇ ಅನುಗ್ರಹ ಮಾಡಿ ವೇದಾದಿ ಶಾಸ್ತ್ರಗಳ ಮುಖಾಂತರ ಆ ತತ್ವವನ್ನು ಜೀವನಿಗೆ ತಿಳಿಸಿ, ತಿಳಿದ ತತ್ವ ಮನದಟ್ಟಾಗುವಂತೆ ಅನುಗ್ರಹಿಸಿ, ಮನದಟ್ಟಾದ ತತ್ವ ಅನುಷ್ಠಾನಕ್ಕೆ ಬರುವಂತೆ ಮಾಡಿ, ತಾನೇ ನಿಂತು ಮಾಡಿಸುವ ಅನುಷ್ಠಾನಗಳಿಂದ ತಾನೇ ಸಂತುಷ್ಟನಾಗಿ, ಅವನಿಗೆ ತನ್ನ ಗುಣ ಮಾಹಾತ್ಮ್ಯಗಳ ಜ್ಞಾನವನ್ನಿತ್ತು, ಆ ತನ್ನ ಗುಣಗಳ ಉಪಾಸನೆಯನ್ನೂ ನಿರಂತರವಾಗಿ ನೀಡಿ, ಕಡೆಗೆ ಪ್ರಾಕೃತದೇಹವೆಂಬ ಗೂಡಿನ ಬ್ರಹ್ಮರಂಧ್ರವನ್ನು ಸೀಳಿ ಅವನು

ಹೊರಬರುವಂತೆ ಮಾಡಿ ಅವನಿಗೆ ತನ್ನ ಲೋಕದಲ್ಲಿ ತನ್ನಂತೆಯೇ ಶಂಖಚಕ್ರಾದಿಗಳನ್ನು ಧರಿಸಿದ ಚತುರ್ಭುಜವುಳ್ಳ, ಪೀತಾಂಬರವನ್ನುಟ್ಟ, ಅಪ್ರಾಕೃತ ಚಿನ್ಮಯ ಶರೀರವನ್ನು ನೀಡಿ, ಅವನಿಗೆ ಅನಂತಕಾಲದವರೆಗೆ ಆನಂದವನ್ನು ನೀಡಬೇಕು.

ಆದ್ದರಿಂದ ಈ ಭ್ರಮರಕೀಟನ್ಯಾಯದಂತೆ ನಮ್ಮಲ್ಲಿ ದಯೆ ತೋರು ಎಂದು ದಾಸರು ಭಗವಂತನಲ್ಲಿ ಬಿನ್ನವಿಸಿದರು.

ನೀ ಪತಿಕರಿಸೆ ಬಳಿಕ ಇನ್ನೇನು ? ನೀನು ಅನುಗ್ರಹಿಸಿದ ಬಳಿಕ ಮತ್ತೇನಿದೆ ? ಎಲ್ಲ ಸಾಧನಸಂದರ್ಭಗಳೂ ನಿನ್ನ ಅನುಗ್ರಹದಿಂದಲೇ ಕೂಡಿ ಬರುತ್ತವೆ. ಮಾರ್ಗ ನಿಷ್ಕಂಟಕವಾಗುತ್ತದೆ. ಫಲ ನಿಶ್ಚಿತವಾಗಿ ದೊರೆಯುತ್ತದೆ. ಆದ್ದರಿಂದ ಚಿಂತಿಸಲೇಕೆ ವಿಘ್ನಗಳ ಕುರಿತು ಚಿಂತೆ ಮಾಡಬೇಕಾದ ಪ್ರಮೇಯವೇನಿದೆ ? ಆವಶ್ಯಕತೆಯಿಲ್ಲ.

ಹೀಗೆ ನಿನ್ನ ಅನುಗ್ರಹಕ್ಕೆ ಸಕಲವನ್ನೂ ನೀಡುವ ಸಾಮರ್ಥ್ಯವಿರುವದರಿಂದ ಓ ಚೆನ್ನಿಗರಾಯ !

ರಕ್ಷಿಸು ನಮ್ಮನನವರತ. ಸರ್ವಕಾಲದಲ್ಲಿಯೂ ನಿನ್ನ ಕೃಪಾದೃಷ್ಟಿ ನಮ್ಮ ಮೇಲಿರುವಂತೆ ಅನುಗ್ರಹಿಸು ॥ ೪೦ ॥

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491